Malaprabha Project

*Q.—135. Sri K. H. PATIL (Gadag).—

Will the Minister for Public Works be pleased to state :—

(a) the progress of Malaprabha Project ;
(b) when it is expected to be completed ;
(c) how much provision has been made in IV Five Year Plan ?

A.—Sri VEERENDRA PATIL (Minister for Public Works).—

(a) The construction of the dam, Nargund branch canal and the main canal up to the offtake of Nargund branch including the tunnel is in progress.

(b) It will be possible to complete the project by 1975 provided adequate funds are available.

(c) Rs. 700 lakns.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಈ ಅಣೆಕಟ್ಟಿನ ವಿಷಯದಲ್ಲಿ ಈಗಾಗಲೇ ಟೆಂಡರ್ ಕರೆದಿದೆಯೇ ? ಮುಖ್ಯ ಒಟ್ಟು ಕೆಲಸದಲ್ಲಿ ಈಗ ಎಷ್ಟು ಭಾಗ ಕೆಲಸ ಪೂರೈಸಿದಂತಾಗಿದೆ ?

ಶ್ರೀ ವೀರೇಂದ್ರ ಪಾಟೀರ್.—ನೀವು ಕೇಳುತ್ತಿರುವುದು ಯಾವುದರ ಬಗ್ಗೆ? ಮಲಪ್ರಭಾ ಪ್ರಾಜೆಕ್ಟಿನಲ್ಲಿ ಬಹಳಷ್ಟು ಕೆಲಸಗಳು ಇವೆ. ಅದರಲ್ಲಿ ಒಂದು ಕೆಲಸದ ಬಗ್ಗೆ ಕೇಳಿದರೆ ಹೇಳಬಹುದು. ಈ ಪ್ರಾಜೆಕ್ಟಿನಲ್ಲಿ ಡ್ಯಾಮ್ ಬರುತ್ತದೆ, ಟನಲ್ ಬರುತ್ತದೆ, ಛಾನಲ್ ಬರುತ್ತದೆ ; ಬಿಲ್ಡಿಂಗ್ ಬರುತ್ತದೆ. ರೋಡ್ಸ್ ಬರುತ್ತದೆ. ಯಾವುದರ ಬಗ್ಗೆ ತಮಗೆ ಮಾಹಿತಿ ಬೇಕು ಎಂದು ಕೇಳಿದರೆ ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಲಪ್ರಭಾ ಅಣೆಕಟ್ಟಿನ ವಿಷಯದಲ್ಲಿ ಈಗಾಗಲೇ ಕೆಲಸ ಎಷ್ಟು ಆಗಿದೆ, ಅದಕ್ಕೆ ಟೆಂಡರ್ ಕರೆದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಲಪ್ರಭಾ ಡ್ಯಾಮಿನ ಬಗ್ಗೆ ಈಗಾಗಲೇ ಟೆಂಡರ್ ಕರೆದಿದ್ದೇವೆ ಈ ಕೆಲಸವನ್ನು ಒಬ್ಬ ಕಂಟ್ರಾಕ್ಟರಿಗೆ 2ನೇ ಮಾರ್ಚಿ 67 ರಲ್ಲಿ ಪಹಿಸಿಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಈ ಕೆಲಸಕ್ಕೆ ಸಾಕಷ್ಟು ಹಣವನ್ನು ಒದಗಿಸಿದಲ್ಲಿ ಇದನ್ನು 1975ನೇ ಇಸವಿಯ ವೇಳೆಗೆ ಪೂರ್ತಿ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದ್ದೀರಿ, ಈಗಾಗಲೇ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಮಂಜೂರಾತಿ ದೊರೆತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರ ಈ ಕೆಲಸಕ್ಕೆ ಮಂಜೂರಾತಿಯನ್ನು ಕೊಡುವ ಪ್ರಶ್ನೆಯಿಲ್ಲ. ನಾವು ಕೇಂದ್ರ ಸರ್ಕಾರದವರನ್ನು ಕೇಳುತ್ತಿದ್ದೇವೆ ದೊಡ್ಡ ದೊಡ್ಡ ಕೆಲಸಗಳಿಗೆ ಹಣವನ್ನು ಕೊಡಿ ಎಂದು. ಈ ಕೆಲಸವನ್ನು ತೀವ್ರವಾಗಿ ಕಾರ್ಯಗತ ಮಾಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಮಗೆ ಮೊದಲು ಅದಕ್ಕೆ ಸಾಕಷ್ಟು ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಇರಿಗೇಷನ್ನಿಗೆ ಹೆಚ್ಚು ಹಣವನ್ನು ಖರ್ಚುಮಾಡಬೇಕೆಂದು ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈಗ ಅಧಿಕಾರಿಗಳು ಹೇಳುತ್ತಿದ್ದಾರೆ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಬಹುಶಃ ಒಂದು ಲಕ್ಷ ಎಕರೆಯವರೆಗೆ ನೀರು ಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು. ಅದಕ್ಕಾಗಿ ಇರಿಗೇಷನ್ನಿಗೆ ಹೆಚ್ಚು ದುಡ್ಡು ಬಂದಾಗ ಈ ಪ್ರಾಜೆಕ್ಟಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಕಷ್ಟು ಹಣವನ್ನು ಒದಗಿಸಿ ಏನು ಮಾಡಬೇಕೋ ಅದನ್ನು ಮಾಡಿ ಇದನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಕೆ. ಎಚ್. ಪಾಟೀಲ್.—1975ನೇ ಇಸವಿಯ ವೇಳೆಗೆ ಈ ಯೋಜನೆಯನ್ನು ಪೂರ್ತಿ ಮಾಡುತ್ತೇವೆಂದು ಹೇಳಿದ್ದೀರಿ, ಗದಗಿನ ನಗರಸಭೆಯವರು ಕೂಡಲೇ ಅಲ್ಲಿಗೆ ನೀರು ಕೊಡಬೇಕೆಂದು ಒತ್ತಾಯ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀರ್.—ಈಗ ಇರಿಗೇಷನ್ನಿಗಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇರಿಗೇಷನ್ನಿಗೆ 56 ಕೋಟಿ ರೂಪಾಯಿಗಳನ್ನು ಒದಗಿಸುವ ಸಾಧ್ಯತೆ ಇದೆ. ಇನ್ನು ಮುಂದೆ ಅದಕ್ಕೆ 100 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂಬ ವಿಚಾರ ಇದೆ. ದುಡ್ಡು ಹೆಚ್ಚು ಬಂದರೆ ತೀವ್ರವಾಗಿ ಅದನ್ನು ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾಲ್ಕನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವ ವರೆಗೆ ಈ ಯೋಜನೆಯ ಬಗ್ಗೆ ಬೇರೆ ಬೇರೆ ಕೆಲಸಗಳಿಗೆ ಎಷ್ಟು ಹಣ ವೆಚ್ಚ ಮಾಡಿದ್ದೀರಿ, ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿದೆ ಎನ್ನುವ ತಪಶೀಲು ಈಗ ನನ್ನ ಹತ್ತಿರ ಇಲ್ಲ. 1967ನೇ ಇಸವಿ ಫೆಬ್ರುವರಿ ತಿಂಗಳು ಅಂತ್ಯದವರೆಗೆ 2,63,87,000 ರೂಪಾಯಿಗಳು ಖರ್ಚಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಯೋಜನೆ ಆರಂಭವಾದದ್ದು ಯಾವಾಗ, ಇದಕ್ಕೆ ಮೊದಲು ಮಾಡಿದ ಎಸ್ಟಿಮೇಟು ಎಷ್ಟು, ಇದುವರೆಗೆ ಆ ಕೆಲಸ ಮಾಡುವುದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ, ಈ ಕೆಲಸ ಪೂರ್ತಿಯಾಗುವವರೆಗೆ ಎಸ್ಟಿಮೇಟೆಡ್ ಕಾಸ್ಟಿಗಿಂತ ಎಷ್ಟು ಕಾಸ್ಟ್ ಹೆಚ್ಚಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—1963ನೇ ಇಸವಿಯಲ್ಲಿ ಈ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬಂತು. ಅದು ಬರುವುದಕ್ಕೆ ಮುಂಚೆ ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಆಗುರಲಿಲ್ಲ. ಪ್ರಿಲಿಮಿನರಿ ಕೆಲಸ ಮಾಡುವುದಕ್ಕೆ 1964ನೇ ಇಸವಿಯಲ್ಲಿ ಟೆಂಡರ್ ಕರೆದು ಟನಲ್ ಕೆಲಸ ಮಾಡಬೇಕೆಂದು ಕಂಟ್ರಾಕ್ಟರಿಗೆ ಆ ಕೆಲಸವನ್ನು ಕೊಟ್ಟಿದ್ದೇವೆ. ಅವರು ಕೆಲಸ ಮಾಡುತ್ತಿದ್ದಾರೆ. ಅಮೇಲೆ ಡ್ಯಾಂ ಕೆಲಸಕ್ಕೂ ಟೆಂಡರ್ ಕರೆದು ಅದನ್ನು ಕೆಲಸವಹಿಸಿದ್ದೇವೆ. ಆದನ್ನು ಮಾಡುತ್ತಿದ್ದಾರೆ. ನರಗುಂದ ಬ್ರಾಂಚ್ ಕೆನಾಲ್ ಕನ್‌ಸ್ಟ್ರಕ್ಷನ್ ಸುಮಾರು 23 ಮೈಲಿ ಕೆಲಸ ನಡೆಯುತ್ತಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅಲ್ಲಿ ಕೆಲಸಗಳನ್ನು ಎಷ್ಟು ಜನ ಕಂಟ್ರಾಕ್ಟರಿಗೆ ವಹಿಸಿದ್ದೀರಿ, ಎಸ್ಟಿಮೇಟೆಡ್ ರೇಟ್‌ಗಿಂತ ಜಾಸ್ತಿ ಯಾವ ಯಾವ ಕೆಲಸಗಳನ್ನು ವಹಿಸಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ತಪಶೀಲು ಈಗ ನನ್ನ ಹತ್ತಿರ ಇಲ್ಲ. ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Sri S. SIVAPPA.—What was the original estimated cost of thit project ? Has it been revised ; if so, what is the cost of the latess estimate ?

Sri VEERENDRA PATIL.—The estimated cost of this project is 20 crores. We have not revised the estimate. So it is not possible for us to say the cost of the revised estimate.

Sri C. K. RAJAIAH SHETTY.—In the tenders called for so far what would be the excess over the estimated cost ?

Sri VEERENDRA PATIL .—How can I say ? That information is not before me.

ಶ್ರೀ ಎಸ್. ಗೋಪಾಲಗೌಡ.—ಉದ್ದೇಶ ಪೂರ್ವಕವಾಗಿ ಮಾನ್ಯ ಸಚಿವರು ಈ ಸಭೆಗೆ ವಿವರ ಕೊಡುತ್ತಿಲ್ಲ. ಸ್ಪಷ್ಟವಾಗಿ ಉತ್ತರ ಕೊಟ್ಟರು. 20 ಕೋಟಿ ಎಸ್ಟಿಮೇಟು ಇದ್ದರೆ ಇದುವರೆಗೆ ಮಾಡಿದ ಕೆಲಸ ಎಷ್ಟು ? ವೆಚ್ಚವಾದ ಹಣ ಎಷ್ಟು ? ಈ ಯೋಜನೆ ಮುಗಿಯುವ ವೇಳೆಗೆ ಯೋಜನೆಯ ಒಟ್ಟು ವೆಚ್ಚ ಎಷ್ಟು ಆಗುವುದು ? ಇದು ಬಹಳ ಸರಳವಾದ ಪ್ರಶ್ನೆ.

ಶ್ರೀ ವೀರೇಂದ್ರ ಪಾಟೀಲ್ —ಉದ್ದೇಶ ಪೂರ್ವಕವಾಗಿ ಯಾವ ಇನ್‌ಫರ್‌ಮೇಷನ್ ಸಭೆಯಿಂದ ಮುಚ್ಚಿಡುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಅರ್ಥವಿಲ್ಲ. ರಿವೈಜ್ಡ್ ಎಸ್ಟಿಮೇಟು ಇನ್ನೂ ಬಂದಿಲ್ಲ. 1974-75 ರ ವರೆಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಈಗ ಹೇಳುವುದಕ್ಕೆ ಆಗುವುದಿಲ್ಲ. ಈಗಿನ ಎಸ್ಟಿಮೇಟೆಡ್ ಕಾಸ್ಟಿನಲ್ಲಿ 2,63,87,000 ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದೇನೆ.